

ಡಿಜಿಟಲ್ ಆಟಿಕೆಗಳತ್ತ ಇತ್ತೀಚೆಗೆ ಎಲ್ಲರ ಗಮನ ಹೆಚ್ಚುತ್ತಿದೆ. ಆದರೆ ಇದರಿಂದ ಮಕ್ಕಳ ಸೃಜನಶೀಲ ಸಾಮರ್ಥ್ಯ ಹೆಚ್ಚುತ್ತದೆಯೆ?

**ಆಟಿಕೆಗಳನ್ನು ಕೊಳ್ಳುವಾಗ ಈ ಕೆಲವು ಅಂಶಗಳನ್ನು ಗಮನಿಸುವುದು ಸೂಕ್ತ**

- ★ ಎಲೆಕ್ಟ್ರಾನಿಕ್ ಆಟಿಕೆಗಳನ್ನು ಖರೀದಿಸುವಾಗ ಮಗುವಿನ ವಯಸ್ಸು ಗಮನದಲ್ಲಿರಲಿ. ಆದಷ್ಟೂ 10 ವರ್ಷಕ್ಕೂ ಮೇಲ್ಪಟ್ಟ ಮಕ್ಕಳಿಗೆ ಮಾತ್ರ ಎಲೆಕ್ಟ್ರಾನಿಕ್ ಆಟಿಕೆ ಖರೀದಿಸಿದರೆ ಒಳಿತು.
- ★ ಗಾಢವಾದ ಬಣ್ಣದ ಅಥವಾ ಹೆಚ್ಚು ಬೆಳಕು ನೀಡುವ ಲೈಟಿಂಗ್ಸ್ ಇರುವ ಆಟಿಕೆಗಳು ಬೇಡ. ಮಕ್ಕಳ ಕಣ್ಣುಗಳಿಗೆ ಅದು ಅಪಾಯ ಉಂಟುಮಾಡಬಹುದು.
- ★ ಹರಿತವಾದ ಮತ್ತು ಅಪಾಯಕಾರಿಯಾದ ಆಟಿಕೆಗಳನ್ನು ಖರೀದಿಸಬೇಡಿ.
- ★ ಮಕ್ಕಳ ವಯಸ್ಸಿಗೆ ಅನುಗುಣವಾದ ಆಟಿಕೆಗಳನ್ನು ಖರೀದಿಸಿ. ಮಕ್ಕಳಲ್ಲಿ ಹತಾಶೆಯನ್ನು ಹೆಚ್ಚಿಸುವ ಆಟಿಕೆಗಳಿಂದ ದೂರವಿರಿ.
- ★ ಆಟಿಕೆಗಳು ಮಗುವಿನ ಸೃಜನಶೀಲತೆಯನ್ನು ಹೆಚ್ಚಿಸುವಂತಿರಲಿ. ಹೊಸದನ್ನು ಸೃಜಿಸುವ ಕುತೂಹಲ ಹುಟ್ಟಿಸುವಂತಿರಲಿ.
- ★ ನೋಡಲು ಎಷ್ಟೇ ಚೆನ್ನಾಗಿದ್ದರೂ ಗಾಜಿನ ಆಟಿಕೆಗಳ ಖರೀದಿ ಖಂಡಿತಾ ಬೇಡ.
- ★ ಬಾಯಿ, ಕಿವಿ ಮತ್ತು ಮೂಗಿನೊಳಗೆ ನುಸುಳಬಹುದಾದಂತಹ ಆಟಿಕೆಗಳನ್ನು ಮಗುವಿನಿಂದ ದೂರವಿಡಿ.
- ★ ಅತೀ ಹೆಚ್ಚು ಶಬ್ದ ಮಾಡುವ ಅಥವಾ ಮಗುವಿಗೆ ಅತೀ ದೊಡ್ಡದಾದ ಆಟಿಕೆ ಖರೀದಿಸಬೇಡಿ.
- ★ ಇನ್ನೊಬ್ಬರಿಗೆ ದೈಹಿಕ ಹಾನಿಯನ್ನು ಉಂಟು ಮಾಡುವ ಆಟಿಕೆಗಳು ಬೇಡ.
- ★ ಆಟಿಕೆ ಖರೀದಿಸುವ ಮುನ್ನ ಆ ಆಟಿಕೆಯಿಂದ ಮಗು ಕಲಿಯಬಹುದಾದ ಅಂಶಗಳನ್ನು ಗಮನಿಸಿ ಖರೀದಿಸಿ.
- ★ ಕಡಿಮೆ ಬೆಲೆಗೆ ಸಿಗುತ್ತದೆಂದು ರಾಸಾಯನಿಕಗಳನ್ನು ಬಳಸಿರುವ ಆಟಿಕೆಗಳು ಬೇಡ. ಬಹುತೇಕ ಮಕ್ಕಳು ಆಟಿಕೆಗಳನ್ನು ಬಾಯಿಯಲ್ಲಿ ಕಚ್ಚುವುದರಿಂದ ಅನಾರೋಗ್ಯದ ಸಂಭವ ಇರುತ್ತದೆ.

ಆಟಿಕೆಗಳನ್ನು ಮಗುವಿನ ಮುಂದೆ ಹರಡಿ ಪಾಲಕರು ತಮ್ಮದೇ ಕೆಲಸದಲ್ಲಿ ಮಗ್ನರಾಗುವುದು ಹೆಚ್ಚು. ಆದರೆ ಸ್ವಲ್ಪ ಸಮಯ ಮಾಡಿಕೊಂಡು ಆಟಿಕೆಗಳ ಮಹತ್ವವನ್ನು ಮಕ್ಕಳಿಗೆ ತಿಳಿಹೇಳುವ ಪ್ರಯತ್ನ ಮಾಡಿ. ಮಕ್ಕಳ ಆಟಕ್ಕೆ ಇನ್ನಷ್ಟು ಕಳೆ ಖಚಿತ. ●